## ಸಸಿತೋಟ

ನಮ್ಮ ಟಿವಿ ವಾಹಿನಿಗಳಲ್ಲಿ ಸಂಗೀತದ ರಿಯಾಲಿಟಿ ಷೋ ಭರಾಟೆಯಿಂದ ನಡೆಯುತ್ತಿದ್ದರೆ, ದೂರದ ಥಾಯ್ಲೆಂಡ್‌ನಲ್ಲಿ ಹುಂಜಗಳ ಹಾಡಿನ ಸ್ಪರ್ಧೆ ಜೋರಂತೆ. ತರಬೇತಿ ಹೇಗೆ ಕೊಡುತ್ತಾರೋ, ಆ್ಯಂಕರ್‌ಗಳು ಹೇಗೆ ಕಿಚಾಯಿಸಿ ಮಜಾ ತೆಗೆದುಕೊಳ್ಳುತ್ತಾರೋ!



ಹೊಸ ವರ್ಷದಲ್ಲಿ ಹೊಸ ಹೊಸ ವೇಷಗಳು. ಪೆರು ದೇಶದಲ್ಲಿ ಜ್ಯೋತಿಷಿಗಳು ಜಗತ್ತಿನ ಮುಖಂಡರ ಭವಿಷ್ಯವನ್ನೆಲ್ಲ ಹೇಳಿ ತೃಪ್ತಿಪಡುತ್ತಾರಂತೆ. ಅದೂ ಹೆಬ್ಬಾವಿನ ಮೂಲಕ. ಕವಡೆ ಉರುಳಿಸುವುದರಿಂದಲೇ ಕರಾರುವಾಕ್ ಭವಿಷ್ಯ ಎನ್ನುವ ದೇಸಿ ಜ್ಯೋತಿಷಿಗಳೆಲ್ಲ ಈಗ ಹೆಬ್ಬಾವು ಹುಡುಕುತ್ತ ಅಡ್ಡಾಡಬಹುದು.



ಪಾಕಿಸ್ತಾನದ ಟಿವಿ ಪತ್ರಕರ್ತ ಅಮೀನ್ ಹಫೀಜ್ ಅಪರೂಪದ ಸಂದರ್ಶನದಲ್ಲಿ ಸಿದ್ಧಹಸ್ತ. ಅಲ್ಲಿ ಸದ್ಯ ಕತ್ತೆಗಳ ಸಂಖ್ಯೆ ಜಾಸ್ತಿಯಾಗಿದ್ದು, ಆತ ಕತ್ತೆಗಳಿಗೇ ಪ್ರಶ್ನೆ ಕೇಳಿದನಂತೆ. ಉತ್ತರ ಆ ಕತ್ತೆಯಿಂದ ಒಂದು ಒಳ್ಳೆಯ ಒದೆತ. ಈ ಹಿಂದೆ ಪಾದಚಾರಿಗಳು ಬಳಸುವ ಮೇಲ್ಸೇತುವೆ ಹತ್ತಿದ ಎಮ್ಮೆಯನ್ನೂ 'ಬಹಳ ಕಷ್ಟಪಟ್ಟಿರಬೇಕಲ್ಲವೇ?'ಎಂದು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದನಂತೆ. ಕುರಿಗೆ 'ನಿನಗೆ ಇಂಗ್ಲಿಷ್ ಮಾತನಾಡಲು ಬರುತ್ತದೆಯೇ?' ಎಂದು ಕೇಳಿದ್ದಕ್ಕೆ ಕುರಿಯ ಪರವಾಗಿ ಆಡಳಿತ ಪಕ್ಷದವರು ಉತ್ತರ ಕೊಟ್ಟಿದ್ದರಂತೆ, ಕೋರ್ಟ್ ಕೇಸ್ ಹಾಕುವ ಮೂಲಕ. ಈಗ ಕತ್ತೆಯ ಒದೆತದ ಜೊತೆ ಪೊಲೀಸರ ಒದೆತ ಗ್ಯಾರಂಟಿ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರಂತೆ.

ಉತ್ತರ ಪ್ರದೇಶದ ಬುಲಂದ್ ಷಹರದಲ್ಲಿ ರೈತರಿಗೆ ಸರ್ಕಾರದ ಇಲಾಖೆ ಪೂರೈಸುವ ರಸಗೊಬ್ಬರ ಮತ್ತು ಕೀಟನಾಶಕದ ಬಗ್ಗೆ ನಂಬಿಕೆ ಇಲ್ಲ ಎನಿಸುತ್ತದೆ. ಆಲೂಗೆಡ್ಡೆ ಬೆಳೆಗೆ ಮದ್ಯ ಸಿಂಪಡಿಸುತ್ತಿದ್ದಾರಂತೆ. ಬಹುಷಃ ಆಲೂ ಪದಾರ್ಥ ಸೇವಿಸಿದವರು 'ಒಳಗೆ ಸೇರಿದರೆ ಆಲೂಗೆಡ್ಡೆ..' ಎಂದು ಹಾಡುತ್ತ ರಸ್ತೆ ಅಳತೆ ಮಾಡಬಹುದು.




ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಲ್ಲಿ ಈ ಯುವತಿ ಕಂಪ್ಯೂಟರ್ ಅನ್ನು ಹೇಗೆ ಎತ್ತಿ ಎಸೆಯುತ್ತಿದ್ದಾಳೆ ನೋಡಿ. ಅಲ್ಲಿ ವರ್ಷಾಂತ್ಯ ಬಂದರೆ ಹಳೆಯ ನೆನಪುಗಳನ್ನೆಲ್ಲ ಒರೆಸಿ ಹಾಕುವ 'ನ್ಯಾಷನಲ್ ಗುಡ್ ರಿಡ್ಡನ್ಸ್ ದಿನ' ಆಚರಿಸುತ್ತಾರಂತೆ. ಆಕೆ ಕಂಪ್ಯೂಟರ್‌ನಲ್ಲಿರುವ ಕೆಟ್ಟ ಮೆಮೊರಿಗಳನ್ನು ಡಿಲೀಟ್ ಮಾಡುವ ಬದಲು ಕಂಪ್ಯೂಟರ್ ಮೇಲೇ ಈ ರೀತಿ ಸೇಡು ತೀರಿಸಿಕೊಳ್ಳಬಾರದಿತ್ತು.



ಕೊಲಂಬಿಯಾದ ಮಿಸ್ಸೌರಿ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಮಸ್ಸಿಮೊ ಹಾಗೂ ಅಮೆಲಿಯಾ ಇಬ್ಬರೂ ಪದವಿ ಪಡೆದರು. ಓದಿ ಪರೀಕ್ಷೆ ಬರೆದ ಮಸ್ಸಿಮೊ 23ರ ಯುವಕನಾದರೆ, ಅಮೆಲಿಯಾ ಆತನ ಪ್ರಾಯೋಗಿಕ ಪರೀಕ್ಷೆಗೆ ಒಡ್ಡಿಕೊಂಡ ಮೂರು ವರ್ಷದ ಹಸು.